'ಬೈವಾಟರ್'ಗೆ ಕಾವೇರಿ ನೀರು ಸರಬರಾಜು ಯೋಜನೆ

3207- ಶ್ರೀ ಆರ್. ಅಶೋಕ್ (ಉತ್ತರ ಹಳ್ಳಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ಬೆಂಗಳೂರು ನಗರಕ್ಕೆ ನೀರು ಪೂರೈಸುವ ಕಾವೇರಿ ನಾಲ್ಕನೇ ಹಂತದ ಯೋಜನೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ಎಂದು ವಹಿಸಿಕೊಡಲಾಗಿದೆ?*

ಆ. *ಈ ಕುರಿತು ಪರ್ಯಾಲೋಚಿಸಿ ಬೆಂಗಳೂರು ಜಲ ಮಂಡಳಿ ವರದಿ ನೀಡಿರುವುದು ನಿಜವೇ? (ವರದಿ ಬಗ್ಗೆ ವಿವರ ನೀಡುವುದು)*

ಇ. *ಈಗ ಮತ್ತೆ ಈ ಯೋಜನೆಯನ್ನು ಬೈವಾಟರ್‌ಗೆ ನೀಡಲಾಗಿದೆಯೇ; ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಈ. *ಈ ಹಿಂದೆ ಸದನದಲ್ಲಿ ಈ ಯೋಜನೆಗೆ ಸಂಬಂಧಪಟ್ಟಂತೆ ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದರೂ ಮತ್ತೆ ಈ ಯೋಜನೆಗೆ ಅನುಮತಿ ನೀಡಿದ್ದ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

ಅ) ಪರಿಶೀಲನೆಯಲ್ಲಿದೆ

ಆ) ಮೇಲಿನ 'ಅ' ಮತ್ತು 'ಆ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿದ್ಯುತ್ ನಿಗಮದಲ್ಲಿ ಭರ್ತಿ ಮಾಡಿಕೊಳ್ಳಲಾಗಿರುವ ಹುದ್ದೆಗಳು

3209 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವಿದ್ಯುತ್ ನಿಗಮದಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು?*

ಆ) *ಎಂದಿನಿಂದ ಈ ಹುದ್ದೆಗಳು ಖಾಲಿ ಇವೆ?*

ಇ) *ಕಳೆದ ಎರಡು ವರ್ಷಗಳಲ್ಲಿ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ ಎಷ್ಟು ಮತ್ತು ಆ ಹುದ್ದೆಗಳು ಯಾವುವು?*

ಈ) *ಹೀಗೆ ಭರ್ತಿ ಮಾಡುವಾಗ ಯೋಜನಾ ಪ್ರದೇಶದ ಸಂತ್ರಸ್ತರ ಕುಟುಂಬಕ್ಕೆ ಕನಿಷ್ಟ ಒಬ್ಬರಿಗಾದರೂ ಆಯ್ಕೆ ಮಾಡಿಕೊಳ್ಳುವ ನಿಯಮವಿದೆಯೇ?*

ಉ) *ಈ ರೀತಿ 2 ವರ್ಷಗಳಲ್ಲಿ ಹುದ್ದೆ ಭರ್ತಿ ಮಾಡುವಾಗ ಶಿವಮೊಗ್ಗ ಜಿಲ್ಲೆಯ ಚಕ್ರಾ ಮತ್ತು ವರಾಹಿ ಸಂತ್ರಸ್ಥ ಕುಟುಂಬಗಳ ಜನರನ್ನು ಆಯ್ಕೆ ಮಾಡಲಾಗಿದೆಯೇ?*

ಊ) *ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?*